ಹಂಚಿಬಿಟ್ಟಿದ್ದೀರಿ. ಬೇರೆ ಜಿಲ್ಲೆಗಳಲ್ಲಿ ಹಾಗೆ ಮಾಡಿಲ್ಲ. ಮಾರಾಟ ಮಹಾ ಮಂಡಳಿಗೆ ಅವರು ಕೊಟ್ಟಿದ್ದಾರೆ. ಇಲ್ಲಿ ಪ್ರೈವೇಟ್ ಕಂಪನಿಗಳಿಗೆ ಸಮನಾಗಿ ಹಂಚ್ಚಿಬಿಟ್ಟಿದ್ದೀರಿ. ಅದಕ್ಕೆ ನಿಮ್ಮ ನೀತಿ ಏನಿದೆ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ಕಂಪನಿಗೆ ಹಂಚಿಬಿಟ್ಟಿದ್ದೀರೆಂದು ಹೇಳುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ೧೭ ಕೋಟಿ ರೂಪಾಯಿ ಸಬ್ಸಿಡಿ ಬಂದಿದೆಯಲ್ಲಾ ಅದನ್ನು ತಾವು ಎಲ್ಲಾ ಕಂಪನಿಗಳಿಗೆ ಸಮನಾಗಿ ಹಂಚಿಬಿಟ್ಟಿದ್ದೀರಿ. ಅವರ ಹತ್ತಿರ ನಾವು ಗೊಬ್ಬರ ತೆಗೆದುಕೊಳ್ಳಬೇಕು. ಅದಕ್ಕಾಗಿ ನಾನು ಇವತ್ತು ಏನು ಹೇಳುತ್ತೇನೆಂದರೆ, ಮಹರಾಷ್ಟ್ರ ಮತ್ತು ಆಂಧ್ರದಲ್ಲಿ ಮಾರಾಟ ಮಹಾ ಮಂಡಳಿಗೆ ದುಡ್ಡು ಕೊಟ್ಟಿದ್ದಾರೆ. ಹಾಗೆ ಇಲ್ಲಿ ಮಾಡಿಲ್ಲ. ಬೇರೆ ಬೇರೆ ಪ್ರೈವೇಟ್ ಕಂಪನಿಗಳಿಗೆ ಹಂಚಿಬಿಟ್ಟಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ಯಾರ ಮುಖಾಂತರ ಗೊಬ್ಬರವನ್ನು ವಿತರಣೆ ಮಾಡಬೇಕೆಂದು ಮೊದಲಿಂದ ಅನುಸರಿಸಿಕೊಂಡು ಬಂದಿದ್ದೇವೆಯೇ ಆ ಮಾರ್ಗದಲ್ಲೇ ಗೊಬ್ಬರ ಹಂಚುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅದು ಯಾರು? ಅದೇ ಇಲ್ಲಿ ತಪ್ಪಾಗಿದೆ ಸರಿಯಾಗಿ ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಆ ವಿಜನ್ಸಿ ಯಾವುದು? ಯಾರ ಮುಖಾಂತರ ೧೭ ಕೋಟಿ ರೂಪಾಯಿ ಕೊಟ್ಟಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ಆ ವಿಷಯ ತಿಳಿದು ನಿಮಗೆ ತಿಳಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ವೆಂಕಟಪ್ಪನವರೇ, ತಮ್ಮ ಪ್ರಶ್ನೆಯು ವಾಣಿಜ್ಯ ಮತ್ತು ಕೈಗಾರಿಗಾ ಇಲಾಖೆಗೆ ವರ್ಗವಾಗಿದೆ. ಮಾನ್ಯ ಮಂತ್ರಿಗಳು ಒಂದು ಅವಶ್ಯಕ ಕೆಲಸದ ಮೇಲೆ ಹೊರಗಡೆ ಹೋಗಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ:- ಪುನಃ ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ? ಮಾನ್ಯ ಮಂತ್ರಿಗಳ ವಿಷಯ ಬಂದಾಗ ನನ್ನ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿ.

ಅಧ್ಯಕ್ಷರು:- ಆಯಿತು.

ವಿಷಯ:- ನೆರೆಪೀಡಿತ ಪ್ರದೇಶಗಳಿಗೆ ಪರಿಹಾರ ನೀಡುವ ಬಗ್ಗೆ.

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.
ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೫೪:- (೬೭೫)
ಶ್ರೀ ಬಸುವರಾಜ ರಾಯರೆಡ್ಡಿ (ಯಲಬುರ್ಗ)

ಅ) ೧೯೯೩ ನೇ ಸಾಲಿನಲ್ಲಿ ನೆರೆಹಾವಳಿ ಪೀಡಿತ ಪ್ರದೇಶಗಳಿಗೆ ಪರಿಹಾರ ಕಾಮಗಾರಿ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಗೆ ಒದಗಿಸಿರುವ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ನೆರೆ ಹಾವಳಿಯಿಂದ ಕೃತರಿಗಾಗಿರುವ ಬೆಳೆ ಹಾನಿ ಎಷ್ಟು ಮತ್ತು ಇದಕ್ಕಾಗಿ ಎಷ್ಟು ಹಣವನ್ನು ಪರಿಹಾರ ನೀಡಲಾಗಿದೆ ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿ ಬೆಳೆ ನಾಶವಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಇ) ನೆರೆ ಹಾವಳಿಯಿಂದ ಲೋಕೋಪಯೋಗಿ ಇಲಾಖೆಯ ರಸ್ತೆ ಮತ್ತು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುವ ರಸ್ತೆಗೆ ಎಷ್ಟು ಹಣ ನೀಡಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಈ) ನೆರೆ ಹಾವಳಿಯಿಂದ ಆದ ಜಾನುವಾರುಗಳ ನಾಶ ಎಷ್ಟು ಮತ್ತು ಇದಕ್ಕೆ ಎಷ್ಟು ಪರಿಹಾರ ನೀಡಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)

(ಶ್ರೀ ಎಂ. ರಾಜಶೇಖರಮೂರ್ತಿ)
(ಕಂದಾಯ ಸಚಿವರು.)

ನೆರೆಹಾವಳಿ ಪೀಡಿತ ಪ್ರದೇಶಗಳಿಗೆ ಪರಿಹಾರ ಕಾಮಗಾರಿ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಗೆ ದಿನಾಂಕ: ೧೭.೧೧.೧೯೬೨ ರಿಂದ ೩೦.೧೨.೧೯೬೨ರವರೆಗೆ ಒಟ್ಟು ರೂ. ೭೬೭.೦೦ ಲಕ್ಷಗಳನ್ನು ಬಿಡುಗಡೆ ಮಾಡಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ 'ಎ'ನಲ್ಲಿ ನೀಡಿದೆ)

ನೆರೆ ಹಾವಳಿಯಿಂದ ೩.೧೩೨ ಲಕ್ಷ ಹೆಕ್ಟೇರ್‌ಗಳಲ್ಲಿದ್ದ ರೂ. ೧೪೦.೪೬ ಕೋಟಿ ಬೆಲೆ ಬೆಳೆ ಹಾನಿ ಆಗಿರುತ್ತದೆ. ಪ್ರತಿ ಹೆಕ್ಟೇರ್‌ಗೆ ರೂ. ೫೦೦ ರಷ್ಟು ಕೃಷಿ ಸಾಮಗ್ರಿಗಳನ್ನು ಪರಿಹಾರವಾಗಿ ಒದಗಿಸಲು ರೂ.೩.೦೦ ಕೋಟಿಗಳನ್ನು ಪ್ರವಾಹ ಪೀಡಿತ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ.

ಪೂರ್ಣ ವಿವರಗಳನ್ನು ಅನುಬಂಧ 'ಬಿ'ನಲ್ಲಿ ಕೊಡಲಾಗಿದೆ.

ಜಿಲ್ಲಾವಾರು ವಿವರಗಳನ್ನು ಅನುಬಂಧ 'ಎ'ನಲ್ಲಿ ನೀಡಿದೆ.

ನೆರೆ ಹಾವಳಿಯಿಂದ ೬೦೭೫೧ ಜಾನುವಾರುಗಳು ನಾಶ ಹೊಂದಿವೆ, ನಷ್ಟ ರೂ.೩೫೦.೮೬ ಲಕ್ಷಗಳೆಂದು ಅಂದಾಜು ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ 'ಸಿ' ನಲ್ಲಿ ನೀಡಿದೆ.

ಅನುಬಂಧ - 'ಎ'

ವಿವಿಧ ಜಿಲ್ಲೆಗಳು ಇಲಾಖೆಗಳಿಗೆ ಸಾರ್ವಜನಿಕ ಆಸ್ತಿ-ಪಾಸ್ತಿಗಳ ದುರಸ್ಥಿ ಮತ್ತು ಪುನರ್‌ನಿರ್ಮಾಣಕ್ಕಾಗಿ ಹಾಗೂ ಸಾಂಕ್ರಾಮಿಕ ರೋಗಗಳ ತಡೆಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಬಿಡುಗಡೆ ಮಾಡಲಾದ ಹಣದ ವಿವರಗಳನ್ನು ತೋರಿಸುವ ತಃಪ್ತೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ದಿನಾಂಕ ೧೭ನೇ ನವೆಂಬರ್ ೧೯೯೨ರಿಂದ ೩೦ನೇ ಡಿಸೆಂಬರ್ ೧೯೯೨ರವರೆಗೆ ಬಿಡುಗಡೆ ಮಾಡಲಾದ ಹಣ						
		ರಸ್ತೆಗಳು ಮತ್ತು ಸೇತುವೆಗಳ ದುರಸ್ಥಿ ಮತ್ತು ಪುನರ್‌ನಿರ್ಮಾಣ	ನೀರಾವರಿ ಇಲಾಖೆ ಭಾರಿ ಮತ್ತು ಜಿ.ಪ.ಗಳ ಸಣ್ಣ ಕೆರೆಗಳ ದುರಸ್ಥಿ ಮತ್ತು ಪು.ನಿರ್ಮಾಣ	ನೀರಾವರಿ ಕಾಮಗಾರಿಗಳ ದುರಸ್ಥಿ		ಪುರಸಭೆ ನಗರಸಭೆಗಳಿಗೆ ಶುದ್ಧೀಕರಿಸಿದ ನೀರು ಸರಬರಾಜಿಗೆ	ಸಾರ್ವಜನಿಕ ಆರೋಗ್ಯ	ಒಟ್ಟು
				ತುಂಗಭದ್ರಾ ಅಚ್ಚುಕಟ್ಟು	ಭದ್ರಾ ಅಚ್ಚುಕಟ್ಟು			
೧.	ರಾಯಚೂರು	೪೫.೦೦	೫.೨೫	೮೨.೫೦	-	೭.೦೦	-	೧೩೯.೭೫
೨.	ಬಳ್ಳಾರಿ	೫೫.೦೦	೫.೨೫	೬೭.೫೦	೯.೭೫	೧೩.೦೦	-	೧೫೦.೫೦
೩.	ಧಾರವಾಡ	೪೫.೦೦	೧೫.೦೦	-	-	-	-	೬೦.೦೦
೪.	ಚಿತ್ರದುರ್ಗ	೩೫.೦೦	೩.೭೫	-	೩೨.೭೫	-	-	೭೨.೫೦
೫.	ಚಿಕ್ಕಮಗಳೂರು	೨೦.೦೦	೧೨.೦೦	-	೬.೭೫	-	-	೩೮.೭೫
೬.	ಶಿವಮೊಗ್ಗ	೨೫.೦೦	೧೯.೫೦	-	೨೪.೭೫	-	-	೬೯.೨೫
೭.	ಮೈಸೂರು	೧೫.೦೦	-	-	-	-	-	೧೫.೦೦
೮.	ದಕ್ಷಿಣ ಕನ್ನಡ	೪೫.೦೦	-	-	-	-	-	೪೫.೦೦
೯.	ಉತ್ತರ ಕನ್ನಡ	೪೦.೦೦	೪.೨೫	-	-	-	-	೪೪.೨೫
೧೦.	ಬಿಜಾಪುರ	-	೧.೫೦	-	-	-	-	೧.೫೦
೧೧.	ಬೀದರ್	-	೦.೭೫	-	-	-	-	೦.೭೫
೧೨.	ಬೆಳಗಾಂ	-	೧.೫೦	-	-	-	-	೧.೫೦
೧೩.	ಹಾಸನ	-	೨.೨೫	-	-	-	-	೨.೨೫
೧೪.	ನಿರ್ದೇಶಕರು							
	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, (ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು)						೧೨೦.೦೦	೧೨೦.೦೦
೧೫.	ನಿರ್ದೇಶಕರು, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆ ಇಲಾಖೆ (ಜಾನುವಾರುಗಳ ಶುಶ್ರೂಷೆಗಾಗಿ)						೨.೦೦	೨.೦೦
	ಒಟ್ಟು:	೩೨೫.೦೦	೭೫.೦೦	೧೫೦.೦೦	೭೫.೦೦	೨೦.೦೦	೧೨೨.೦೦	೭೭೭.೦೦

ಅನುಬಂಧ- 'ಬ'

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಹಾನಿಗೊಳಗಾಗಿರುವ ಪ್ರದೇಶ(ಲಕ್ಷ ಹೆಕ್ಟೇರ್ ಗಳಲ್ಲಿ)	ಉಂಟಾಗಿರುವ ಹಾನಿ	ಬಿಡುಗಡೆ ಮಾಡಿರುವ ಹಣ	ಕೃಷಿಸಾಮಗ್ರಿಗಳ ರೂಪದಲ್ಲಿ ನೀಡಿರುವ ಪರಿಹಾರ
೧.	ರಾಯಚೂರು	೧.೧೫	೮೩೮೩.೭೬	೧೨೫.೦೦	-
೨.	ಬಳ್ಳಾರಿ	೦.೪೭	೨೦೮೨.೦೯	೧೦೦.೦೦	
೩.	ಧಾರವಾಡ	೦.೫೭	೧೬೦೩.೧೭	೨೫.೦೦	
೪.	ಚಿತ್ರದುರ್ಗ	೦.೨೬	೮೭೨.೯೦	೨೫.೦೦	೧.೭೬
೫.	ಶಿವಮೊಗ್ಗ	೦.೧೮	೪೮೪.೦೦	-	೪೦.೫೯
೬.	ಚಿಕ್ಕಮಗಳೂರು	೦.೦೫	೮೭.೯೫	-	೦.೫೫
೭.	ಮೈಸೂರು	೦.೦೨	೩೩.೫೫	-	೦.೨೪
೮.	ಉತ್ತರ ಕನ್ನಡ	೦.೦೬	೨೦೦.೦೦	೫.೦೦	೫.೦೦
೯.	ದಕ್ಷಿಣ ಕನ್ನಡ	೦.೦೫	೪೫.೮೨	೫.೦೦	೬.೮೪
೧೦.	ಹಾಸನ	೦.೦೧	೨೭.೮೧	-	-
೧೧.	ಕೊಡಗು	೦.೦೨	೨೦.೭೫	-	-
೧೨.	ಬೆಳಗಾಂ	೦.೨೬	೧೦೦.೪೦	೧೫.೫೦	-
೧೩.	ಬಿಜಾಪುರ	೦.೦೨	೯೮.೧೨	-	-
೧೪.	ತುಮಕೂರು	೦.೦೩	೬.೩೦	-	-
	ಒಟ್ಟು	೩.೧೩೨	೧೪೦೪೬.೬೨	೩೦೦.೦೦	೫೪.೯೪

ಅನುಬಂಧ-ಸಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಾಶವಾಗಿರುವ ಜಾನುವರುಗಳ		(ರೂ. ಲಕ್ಷಗಳಲ್ಲಿ)
		ಸಂಖ್ಯೆ	ಹಾನಿ ರೂ.ಲಕ್ಷಗಳಲ್ಲಿ	ನೀಡಿರುವ ಪರಿಹಾರ
೧.	ರಾಯಚೂರು	೧೭೯೧	೧೨೭.೮೪	೧೭.೪೨
೨.	ಬಳ್ಳಾರಿ	೧೬೮೪೯	೮೭.೯೨	೬೩.೯೨
೩.	ಧಾರವಾಡ	೧೬೭೮೮	೮೦.೧೯	೧೬.೭೨
೪.	ಚಿತ್ರದುರ್ಗ	೧೦೯೬	೯.೫೫	೪.೭೭
೫.	ಶಿವಮೊಗ್ಗ	೭೫೦	೭.೦೦	೧.೦೦
೬.	ಚಿಕ್ಕಮಗಳೂರು	೪೭	೦.೨೫	೦.೧೪
೭.	ಮೈಸೂರು	೧೪೧೪	೬.೨೦	೨.೦೦
೮.	ಉತ್ತರ ಕನ್ನಡ	೪೭೬	೦.೬೦	೦.೬೦
೯.	ದಕ್ಷಿಣ ಕನ್ನಡ	೧	೦.೦೦೩	೦.೦೦೩
೧೦.	ಹಾಸನ	೪	೦.೦೪೩	೦.೦೨೦
೧೧.	ಕೊಡಗು	೧೧	೦.೨೪	೦.೦೪
೧೨.	ಬೆಳಗಾಂ	೪೦೦೬	೨೫.೭೫	-
೧೩.	ಗುಲ್ಬರ್ಗಾ	೧೪೯	೧.೩೬	೧.೩೬
೧೪.	ಬಿಜಾಪುರ	೧೦೨೯	೪.೦೦	-
	ಒಟ್ಟು	೬೦೭೫೧	೩೫೦.೯೪೬	೧೦೪.೯೯೩